೨ 'ಇ'ಯಲ್ಲಿ ಕಾಟನ್ ಗ್ರೋಯರ್ಸ್‌ಗೆ ಒಂದು ರೆಪ್ರಸೆಂಟೇಷನ್' ಎಂಬುದಕ್ಕೆ ಎರಡು ರೆಪ್ರಸೆಂಟೇಷನ್ ಎಂದು ಮಾತ್ರ, 'ಹೆಚ್'ನಲ್ಲಿ ಛೇರ್ಮನ್ ಆಫ್ ದಿ ಸ್ಟೇಟ್ ಕೋ-ಆಪರೇಟೀವ್ ಸ್ಪಿನ್ನಿಂಗ್ ಮಿಲ್ಸ್ ಫೆಡರೇಷನ್ ಎಂದು ತಿದ್ದುಪಡಿ ಮಾಡುವುದು''

ಪ್ರಸ್ತಾವವನ್ನು ಅನುಮೋದಿಸಲಾಯಿತು ಮತ್ತು ತಿದ್ದುಪಡಿಯನ್ನು ಅಂಗೀಕರಿಸಲಾಯಿತು.

೨-೦೦ ಪಿ.ಎಂ.

ಖಂಡ ೨ ರಿಂದ ೪ ರವರೆಗೆ

ಅಧ್ಯಕ್ಷರು. —' ಖಂಡ ೨ ರಿಂದ ೪ ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೨ ರಿಂದ ೪ ವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ ೧ ಇತ್ಯಾದಿ. —

ಅಧ್ಯಕ್ಷರು. —ಪ್ರಸ್ತಾವ ಏನೆಂದರೆ ''ಮೊದಲನೇಯ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.''

ಪ್ರಸ್ತಾವವನ್ನು ಅಂಗೀಕರಿಸಲಾಯಿತು

(ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ ಪಿ ಪ್ರಕಾಶ್ (ವ್ಯವಸಾಯ ರಾಜ್ಯ ಮಂತ್ರಿ).—''೧೯೮೬ನೇ ಇಸವಿಯ ಹತ್ತಿ ಬೀಜ ತೆಗೆಯುವ ಹಾಗೂ ಒತ್ತುವ ಕೈಗಾರಿಕೆಗಳ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸಬೇಕೆಂದು ಕೋರುತ್ತೇನೆ.''

ಅಧ್ಯಕ್ಷರು. —ಪ್ರಸ್ತಾವ ಏನೆಂದರೆ ''೧೯೮೬ನೇ ಇಸವಿಯ ಹತ್ತಿ ಬೀಜ ತೆಗೆಯುವ ಹಾಗೂ ಒತ್ತುವ ಕೈಗಾರಿಕೆಗಳ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು''.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಂಸೂದೆಗೆ ಒಪ್ಪಿಗೆ ನೀಡಲಾಯಿತು.

ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ, ೧೯೮೬

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಸ್.ಆರ್. ಬೊಮ್ಮಾಯಿ (ಕಂದಾಯ ಹಾಗೂ ಯೋಜನಾ ಮಂತ್ರಿ).—ಮಾನ್ಯ ಅಧ್ಯಕ್ಷರೇ, ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ ೧೯೮೬ ಅನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಎಸ್.ಆರ್. ಬೊಮ್ಮಾಯಿ. —ಮಾನ್ಯ ಅಧ್ಯಕ್ಷರೇ, ಇದೊಂದು ಚಿಕ್ಕ ತಿದ್ದುಪಡಿ ಇದೆ. ಕಳೆದ ಹಲವಾರು ವರ್ಷಗಳಿಂದ ಸರ್ಕಾರಕ್ಕೆ ರೈತರಿಂದ ಮನವಿಗಳು ಬಂದಿವೆ. ಏನೆಂದರೆ ನೀರಾವರಿಗಾಗಿ ಪೈಪು ಲೈನ್ ಮಾಡಿಕೊಳ್ಳುವಾಗ ಬೇರೆ ಜಮೀನುಗಳ ಮೂಲಕ ಪೈಪನ್ನು ತೆಗೆದುಕೊಂಡು ಹೋಗಬೇಕಾಗುತ್ತದೆ. ಅದಕ್ಕಾಗಿ ಒಪ್ಪಿಗೆ ಕೊಡದಿದ್ದರೆ ನೀರಾವರಿ ಸೌಕರ್ಯ ಪಡೆಯಲಿಕ್ಕೆ ಅಡ್ಡಿ ಬರುತ್ತದೆ. ಅದಕ್ಕಾಗಿ ಈ ದಿಸೆಯಲ್ಲಿ ತಹಸೀಲ್ದಾರರಿಗೆ ಅಧಿಕಾರ ಕೊಡುತ್ತಿದ್ದೇವೆ. ಅಗ್ರಿಮೆಂಟ್ ಆದರೆ ಇದರ ಅವಶ್ಯಕತೆ ಇರುವುದಿಲ್ಲ. ಆದರೆ ಎಲ್ಲೆ ಅಗ್ರಿಮೆಂಟ್ ಆಗುವುದಿಲ್ಲ. ಅಲ್ಲಿ ತಹಸೀಲ್ದಾರರಿಗೆ

ಅರ್ಜಿಯನ್ನು ಕೊಟ್ಟರೆ, ವಿಚಾರಣೆ ಮಾಡಿ ಸಂಬಂಧಪಟ್ಟಂಥ ಭೂ ಒಡೆಯರಿಗೆ ನೋಟೀಸ್ ಕೊಟ್ಟು ಅನಾನುಕೂಲತೆ ಆಗದ ರೀತಿಯಲ್ಲಿ ನೀರಾವರಿ ಸೌಲಭ್ಯವನ್ನು ಪೈಪ್ ಮೂಲಕ ತೆಗೆದುಕೊಂಡು ಹೋಗುವುದಕ್ಕೆ ಅವಕಾಶ ಕೊಡುವಂತಹ ಚಿಕ್ಕ ಮಸೂದೆ ಇದೆ. ಇದಕ್ಕೆ ಅನುಮತಿಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಪ್ರಸ್ತಾಪ ಏನೆಂದರೆ 'ರಿಲೇಟಿಂಗ್ ಟು ಇರಿಗೇಷನ್ ಫ್ರಂ ಟ್ಯಾಂಕ್ಸ್ ಇನ್ ಸಮಿಯ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಂಕವನ್ನು ಪರ್ಯಾಲೋಚಿಸುವುದು'

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಅಧ್ಯಕ್ಷರು.—ಈಗ ಖಂಡ ಖಂಡವಾಗಿ ಮಾತಕ್ಕೆ ಹಾಕುತ್ತೇನೆ, .ಶ್ರೀ ಆರ್. ವೆಂಕಟರಾಮಯ್ಯ ನವರು ಒಂದು ತಿದ್ದುಪಡಿಯನ್ನು ಕೊಟ್ಟಿದ್ದಾರೆ. ಅವರು ಅದನ್ನು ಮಂಡಿಸಬಹುದು.

ಶ್ರೀ ಆರ್. ವೆಂಕಟರಾಮಯ್ಯ.—ಈ ತಿದ್ದುಪಡಿ ನಿಜಕ್ಕೂ ಸ್ವಾಗತಾರ್ಹವಾದದ್ದು. ಇದರ ಬಗ್ಗೆ ನಮ್ಮ ವಿರೋಧವೇನೂ ಇಲ್ಲ. ಬಹಳ ದಿನಗಳಿಂದ ಇದು ರೈತರಿಗೆ ಬೇಕಾಗಿರುವುದೇ ಆಗಿದೆ. ಆದರೆ ನಮ್ಮ ಕಡೆ ಏನಾಗುತ್ತದೆ ಎಂದರೆ, ಇವರು ಕಾಲುವೆಯನ್ನು ಏನು ಮಾಡುತ್ತಾರೆ, ಅಲ್ಲಿ ಇಲ್ಲಿ ಮಾಡುತ್ತಾರೆ. ಅದರ ಬದಲು ಬದುವಿನ ಪಕ್ಕದಲ್ಲಿ ತೆಗೆದುಕೊಂಡು ಹೋದರೆ ಒಳ್ಳೆಯದು. ಇದರಿಂದ ರೈತರಿಗೆ ಆಗುವ ತೊಂದರೆಯನ್ನು ತಪ್ಪಿಸಬಹುದು.

ಇನ್ನೊಂದು ನನ್ನ ತಿದ್ದುಪಡಿ ಎಂದರೆ, ತಹಸೀಲ್ದಾರರಿಗೆ ಟೈಂ ಲಿಮಿಟ್ ಕೊಡಿ. ಈ ರೀತಿಯ ಬೇಕಾದಷ್ಟು ಕೇಸುಗಳು ಇವೆ. ತಹಸೀಲ್ದಾರರಿಗೆ ಅರ್ಜಿ ಕೊಟ್ಟ ಮೇಲೆ ಎರಡು ತಿಂಗಳಲ್ಲಿ ಅನುಕೂಲವಾಗುವಂತೆ ಇರಬೇಕು, ಇಲ್ಲದಿದ್ದರೆ ಡಿಸ್‌ಪ್ಯೂಟ್ ಕೇಸುಗಳಾಗಿ ವರ್ಷಾನುಗಟ್ಟಲೆ ತಳ್ಳಿಕೊಂಡು ಹೋಗುವ ಸಂದರ್ಭಗಳು ಇರುತ್ತವೆ. ಆದ್ದರಿಂದ ಮೊದಲನೆಯದಾಗಿ ತಹಸೀಲ್ದಾರರಿಗೆ ಅರ್ಜಿ ಕೊಟ್ಟರೆ ಎರಡು ತಿಂಗಳಲ್ಲಿ ಮಾಡಬೇಕು ಎಂದು ಹೇಳಿದ್ದೇನೆ. ಇನ್ನೊಂದು ಕಾಲುವೆ ಮಾಡುವಾಗ ಬದುವಿನ ಪಕ್ಕದಲ್ಲಿ ಅದನ್ನು ಮಾಡಬೇಕೆಂದು ಸೂಚನೆ ಮಾಡಿದ್ದೇನೆ, ದಯವಿಟ್ಟು ಇದನ್ನು ಒಪ್ಪಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಮೂಲತ : ನಾನು ಈ ತಿದ್ದುಪಡಿ ವಿಧೇಯಕವನ್ನು ಸ್ವಾಗತ ಮಾಡುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ —ಇಲ್ಲಿ ಹೀಗೆ ಪುಟದಲ್ಲಿ'..... as directed by the Tahsildar so as to cause as little damage to the land.....' ಎಂದು ಇದೆ. ಇದರಲ್ಲಿ ಕಡಿಮೆ ನಷ್ಟವಾಗುವ ರೀತಿಯಲ್ಲಿ ತಹಸೀಲ್ದಾರರು ಅವಕಾಶ ಮಾಡಿಕೊಡಬೇಕೆಂದು ಇದೆ. ಗೈಡ್‌ಲೈನ್ಸ್ ಸ್ಪಷ್ಟವಾಗಿ ಇದೆ. ರೂಲ್ಸ್‌ನಲ್ಲಿ ಕೂಡ ಇದನ್ನು ಮಾಡುತ್ತಿದ್ದೇವೆ.

ಶ್ರೀ ಆರ್. ವೆಂಕಟರಾಮಯ್ಯ.—ಬದುವಿನ ಪಕ್ಕದಲ್ಲಿ ಹಾಕಿಬಿಟ್ಟರೆ ಯಾರಿಗೂ ನಷ್ಟ ಇಲ್ಲವಲ್ಲ?

ಶ್ರೀ ಎಸ್.ಆರ್. ಬೊಮ್ಮಾಯಿ.—ಕೆಲವು ಸಲ ಬದುವಿನ ಪಕ್ಕದಲ್ಲಿ ಹೋದರೂ ಅನುಕೂಲವಾಗಬಹುದು, ಬೇರೆ ಕಡೆ ಹೋದರೂ ಅನುಕೂಲವಾಗಬಹುದು. ಕಡಿಮೆ ನಷ್ಟ ಆಗುವ ರೀತಿಯಲ್ಲಿ ಮಾಡಬೇಕು ಎನ್ನುವ ಸೂಚನೆ ಇದರಲ್ಲಿ ಇದೆ. ಮತ್ತೆ ತಹಸೀಲ್ದಾರರಿಗೆ ಟೈಮ್ ಲಿಮಿಟೇಶನ್ ಹಾಕಲಿಕ್ಕೆ ಬರುವುದಿಲ್ಲ. ಬೇಗ ಮಾಡಬೇಕೆಂದು ಹೇಳಿದ್ದೇವೆ. ಆದ್ದರಿಂದ ಇದಕ್ಕೆ ಒತ್ತಾಯ ಮಾಡದೇ ಇದನ್ನು ಅನುಮೋದಿಸಬೇಕೆಂದು ಹೇಳುತ್ತೇನೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ನನ್ನದೊಂದು ಸೂಚನೆ ಇದೆ. ರೈತರಿಗೆ ಕಂಡಿಯುವ ನೀರನ್ನು ಪೈಪ್ಡ್ ವಾಟರ್ ಮೂಲಕ ಕೊಡಬೇಕೆಂದು ಸರ್ಕಾರದ ಧೋರಣೆ ಇರುವುದರಿಂದ, ಇದರಲ್ಲಿ ಡ್ರಿಂಕಿಂಗ್ ವಾಟರ್ ಕೊಡಬೇಕೆಂದು ಕೂಡ ಸೇರಿಸಬೇಕೆಂದು ನಾನು ಹೇಳುತ್ತೇನೆ.

ಅಧ್ಯಕ್ಷರು.—ಈಗ ಮಾನ್ಯ ವೆಂಕಟರಾಮಯ್ಯನವರು ತಮ್ಮ ತಿದ್ದುಪಡಿಯನ್ನು ಮಂಡಿಸಬೇಕು.

ಶ್ರೀ ಆರ್ ವೆಂಕಟರಾಮಯ್ಯ.—ನನ್ನ ತಿದ್ದುಪಡಿ ಸೂಚನೆಯನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು.—ತಿದ್ದುಪಡಿ ಸಭೆಯ ಅನುಮತಿಯ ಮೇರೆಗೆ ವಾಪಸ್ಸು ಪಡೆಯಲಾಯಿತು.

ಖಂಡ ೨

ಅಧ್ಯಕ್ಷರು.—" ಖಂಡ ೨ ಈ ವಿಧೇಯಕದ ಅಂಗವಾಗಿರುತ್ತದೆ "

(ಪ್ರಸ್ತಾಪವು ಅಂಗೀಕರಿಸಲ್ಪಟ್ಟಿತು)

(ಖಂಡ ೨ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ ೧ ಇತ್ಯಾದಿ

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ " ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ "

ಪ್ರಸ್ತಾವವನ್ನು ಅಂಗೀಕರಿಸಲಾಯಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು).

ಶ್ರೀ ಎಸ್. ಆರ್. ಬೊಮ್ಮಾಯಿ.—ಪ್ರಸ್ತಾಪವನ್ನು ಮಂಡಿಸುತ್ತೇನೆ. ಮಾನ್ಯ ಸದಸ್ಯರಾದ ಶ್ರೀಮತಿ ಲೀಲಾದೇವಿ ಪ್ರಸಾದ್‌ರವರು ಪ್ರಸ್ತಾಪ ಮಾಡಿರುವ ವಿಷಯವಾಗಿ ಹೇಳುವುದಾದರೆ ಕುಡಿಯುವ ನೀರಿಗೆ ಸಂಬಂಧಪಟ್ಟಂತೆ ಕೂಡ ಈ ಕಾನೂನಿನಲ್ಲಿ ಅವಕಾಶ ಇದೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ " ೧೯೫೬ರ ಕರ್ನಾಟಕ ಭೂಕಂದಾಯ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು "

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕವನ್ನು ಅಂಗೀಕರಿಸಲಾಯಿತು

೧೯೫೬ನೇ ಕರ್ನಾಟಕ ಕೊಳಚೆ ಪ್ರದೇಶಗಳ ಅಭಿವೃದ್ಧಿ ಹಾಗೂ ನಿರ್ಮೂಲನ ತಿದ್ದುಪಡಿ ವಿಧೇಯಕ.

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಮಂತ್ರಿಯವರು).—ಮಾನ್ಯ ಅಧ್ಯಕ್ಷರೇ, "೧೯೫೬ನೇ ಕರ್ನಾಟಕ ಕೊಳಚೆ ಪ್ರದೇಶಗಳ ಅಭಿವೃದ್ಧಿ ಹಾಗೂ ನಿರ್ಮೂಲನ ತಿದ್ದುಪಡಿ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಅಧ್ಯಕ್ಷರು.—ವಿಧೇಯಕವನ್ನು ಮಂಡಿಸಲಾಗಿದೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಕೊಳಚೆ ಪ್ರದೇಶಗಳ ಅಭಿವೃದ್ಧಿಗೆ ಸಂಬಂಧಪಟ್ಟಂತೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವಾಗ ಸಂಬಂಧಪಟ್ಟ ಜಮೀನಿಗೆ ಪರಿಹಾರ ಕೊಡುವಂಥಾದ್ದು ಹಿಂದಿನಿಂದಲೂ ಬಂದಿದೆ. ಈಗ ಅದನ್ನು ೧೦೦ಕ್ಕೆ ಬದಲಾಗಿ ೩೦೦ರಷ್ಟು ಕೊಡಬೇಕೆಂದು ತಿದ್ದುಪಡಿ ತರಲಾಗಿದೆ. ಅದಕ್ಕೆ ಸಭೆ ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಇದಕ್ಕೆ ನನ್ನ ವಿರೋಧ ಇದೆ. ಕರ್ನಾಟಕ ಕೊಳಚೆ ಪ್ರದೇಶಗಳ ಅಭಿವೃದ್ಧಿಗೆ ಸಂಬಂಧಪಟ್ಟ ಆಕ್ಟ್‌ನ್ನು ನಾನೇ ತಂದಿದ್ದೆ. ದಕ್ಷಿಣ ಭಾರತದಲ್ಲಿ ಕೊಳಚೆ ಪ್ರದೇಶಗಳು ಏನಿವೆ, ಅವುಗಳನ್ನು ಯಾವರೀತಿ ಅಭಿವೃದ್ಧಿ ಮಾಡಬೇಕು ಎನ್ನುವ ಬಗ್ಗೆ ಯೋಚನೆ ಮಾಡಿ ಇದನ್ನು ತೆಗೆದುಕೊಂಡು ಬರಲಾಗಿತ್ತು. ಆದರೆ, ಈ ಕಾನೂನನ್ನು ಪರಿಣಾಮಕಾರಿಯಾಗಿ ಕಾರ್ಯಗತ ಮಾಡುವುದಕ್ಕೆ ಸರ್ಕಾರಕ್ಕೆ ಸಾಧ್ಯವಾಗಲೇ ಇಲ್ಲ. ಕಾರಣ ಏನೆಂದರೆ, ಸರ್ಕಾರದಲ್ಲಿ ಸಾಕಷ್ಟು ಹಣ ಇಲ್ಲ. ಯಾವ ಯಾವ ಬಾಬಿನಿಂದ ಹಣವನ್ನು ಅಳವಡಿಸಬೇಕೆಂದು ಕಾನೂನಿನಲ್ಲಿ ಅಳವಡಿಸಿದ್ದಾರೋ, ಆ ಬಾಬಿನಿಂದ ಹಣ ಪಡೆಯುವಂಥ ಪ್ರಯತ್ನವನ್ನು ಮಾಡಿಯೇ